## 'ಒಲಿಂಪಿಕ್ ಖೇಲ್' ವಾಟ್ಸ್‌ಆ್ಯಪ್ ಚಾನಲ್

ಪ್ಯಾರಿಸ್ ಒಲಿಂಪಿಕ್ಸ್ ಶುರುವಾಗಿದ್ದು, ಹಲವರು ಪ್ರಶಸ್ತಿಗೆ ಈಗಾಗಲೇ ಮುತ್ತಿಟ್ಟಿದ್ದಾರೆ. ದೂರದ ಪ್ಯಾರಿಸ್‌ನಲ್ಲಿ ನಡೆಯುವ ಈ ಕ್ರೀಡಾಕೂಟದ ಬಗ್ಗೆ ಭಾರತೀಯರಿಗೆ ನಿಖರ ಮಾಹಿತಿ ಒದಗಿಸಲು, 'ಒಲಿಂಪಿಕ್ ಖೇಲ್' ಎಂಬ ವಾಟ್ಸ್‌ಆ್ಯಪ್ ಚಾನಲ್ ಬಿಡುಗಡೆಗೊಂಡಿದೆ.

ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯು (ಐಒಸಿ) ರೂಪಿಸಿರುವ ಈ ಚಾನಲ್ ಅನ್ನು ಭಾರತೀಯರು ಫಾಲೊ ಮಾಡಬಹುದು. ಈ ಬಾರಿಯ ಒಲಿಪಿಂಕ್ಸ್‌ನಲ್ಲಿ ಪಾಲ್ಗೊಂಡಿರುವ ಭಾರತೀಯ ಆಟಗಾರರು, ಅವರು ಸ್ಪರ್ಧಿಸಿದ ಕ್ರೀಡೆಗಳ ಹಾಗೂ ಸ್ಪರ್ಧೆಗಳ ಫಲಿತಾಂಶದ ಬಗ್ಗೆ ತಾಜಾ ಹಾಗೂ ನಿಖರ ಮಾಹಿತಿ ತಿಳಿಯಲು ಈ ಚಾನಲ್ ರೂಪಿಸಲಾಗಿದೆ. ಜೊತೆಗೆ ಕ್ರೀಡಾಪಟುಗಳ ತೆರೆಮರೆಯ ವಿಶೇಷಗಳನ್ನೂ ಇದು ಒಳಗೊಂಡಿರಲಿದೆ. ಭಾರತದ 117 ಕ್ರೀಡಾಪಟುಗಳ ಮಾಹಿತಿಯನ್ನು ಇದರಲ್ಲಿ ತಿಳಿಯಬಹುದು.

'Olympic Khel' ಎಂದು ವಾಟ್ಸ್‌ಆ್ಯಪ್‌ನ ಚಾನಲ್ ವಿಭಾಗದಲ್ಲಿ ಟೈಪಿಸಿದರೆ ಚಾನಲ್ ಲಭ್ಯವಾಗುತ್ತದೆ. ಇದನ್ನು ಫಾಲೊ ಮಾಡಿದರೆ ಸಾಕು, ಕ್ರೀಡಾಕೂಟದ ಬಗ್ಗೆ ಸಂಪೂರ್ಣ ಮಾಹಿತಿಯು ಕಾಲಕಾಲಕ್ಕೆ ನಿಮಗೆ ಅಪ್‌ಡೇಟ್ ಆಗಲಿದೆ.




# ಇಂಟರ್‌ನೆಟ್ ಹಂಗಿಲ್ಲದ 'ನಿಯರ್‌ಬೈ ಶೇರ್'

**■ ಶಶಿಕುಮಾರ್ ಸಿ.**

ಐಫೋನ್ ಕಾರ್ಯಾಚರಣಾ ವ್ಯವಸ್ಥೆಯ (ಐಒಎಸ್) 'ಏರ್‌ಡ್ರಾಪ್' ಫೀಚರ್‌ನಂತೆಯೇ ವಾಟ್ಸ್‌ಆ್ಯಪ್ ಸಹ ತನ್ನ ಪ್ಲಾಟ್‌ಫಾರ್ಮ್‌ನಲ್ಲಿ ಅಂತರ್ಜಾಲದ ಸೌಲಭ್ಯವಿಲ್ಲದೆ ಫೈಲ್‌ಗಳನ್ನು ಹಂಚಿಕೊಳ್ಳುವ ಹೊಸ ಫೀಚರ್ ಅಭಿವೃದ್ಧಿಪಡಿಸಿದೆ. ಈ ಹೊಸ ಫೀಚರ್ ಸದ್ಯ ಪ್ರಾಯೋಗಿಕ ಹಂತದಲ್ಲಿದೆ.

'ನಿಯರ್‌ಬೈ ಶೇರ್'ನಲ್ಲಿ ಅಧಿಕ ಗುಣಮಟ್ಟದ ಡಾಕ್ಯುಮೆಂಟ್, ವಿಡಿಯೊ, ಚಿತ್ರಗಳನ್ನು ಅಂತರ್ಜಾಲ ಸಂಪರ್ಕವಿಲ್ಲದೆ ಎರಡು ಫೋನ್‌ಗಳ ನಡುವೆ ಹಂಚಿಕೊಳ್ಳಬಹುದು. ಸದ್ಯ ಈ ಫೀಚರ್ ಬೇಟಾ ವರ್ಷನ್‌ನಲ್ಲಿ ಮಾತ್ರ ಲಭ್ಯವಿದ್ದು, ಕೆಲವು ತಿಂಗಳಲ್ಲೇ ಬಳಕೆಗೆ ಮುಕ್ತವಾಗಲಿದೆ.

ಬೇಟಾ ಆವೃತ್ತಿಯಲ್ಲಿ ಸಮೀಪದ ಫೋನ್‌ನೊಂದಿಗೆ ಹೆಚ್ಚಿನ ಗಾತ್ರದ ಎಚ್‌ಡಿ ಗುಣಮಟ್ಟದ ವಿಡಿಯೊ, ಚಿತ್ರಗಳನ್ನು ಕಳುಹಿಸಲು ಸಾಧ್ಯವಾಗಿದೆ. ಇದು ಆ್ಯಪಲ್ ಉತ್ಪನ್ನಗಳಲ್ಲಿ ಲಭ್ಯವಿರುವ ಏರ್‌ಡ್ರಾಪ್ ಫೀಚರ್‌ನಂತೆಯೇ ಕಾರ್ಯನಿರ್ವಹಿಸಲಿದೆ. ಎರಡು ಫೋನ್‌ಗಳು ಸಮೀಪವಿದ್ದಾಗ ಮಾತ್ರ ಫೈಲ್‌ಗಳನ್ನು ಪರಸ್ಪರ ಹಂಚಿಕೊಳ್ಳಲು ಸಾಧ್ಯ. ಇದಕ್ಕೆ ಕೆಲವೇ ಸೆಕೆಂಡುಗಳು ಸಾಕು ಎಂಬುದು ಬೇಟಾ ಆವೃತ್ತಿ ಬಳಕೆದಾರರ ಅಭಿಪ್ರಾಯ.




ಸದ್ಯದ ಪರಿಸ್ಥಿತಿಯಲ್ಲಿ ಐಫೋನ್ ಮತ್ತು ಆ್ಯಂಡ್ರಾಯ್ಡ್ ನಡುವೆ ಫೈಲ್‌ಗಳನ್ನು ಹಂಚಿಕೊಳ್ಳುವುದು ತೀರಾ ಕಷ್ಟದ ಕೆಲಸ. ವಾಟ್ಸ್‌ಆ್ಯಪ್‌ನ ಉದ್ದೇಶಿತ ಸೌಲಭ್ಯದಿಂದಾಗಿ, ಎರಡೂ ಭಿನ್ನ ಆಪರೇಟಿಂಗ್ ಸಿಸ್ಟಂಗಳ ನಡುವೆ ಸರಾಗವಾಗಿ ಫೈಲ್‌ಗಳನ್ನು ಹಂಚಿಕೊಳ್ಳಲು ಅನುವಾಗಲಿದೆ. ಆ್ಯಪಲ್ ಫೋನ್‌ನ ವಾಟ್ಸ್‌ಆ್ಯಪ್‌ಗೂ, ಆ್ಯಂಡ್ರಾಯ್ಡ್ ಫೋನ್‌ನ ವಾಟ್ಸ್‌ಆ್ಯಪ್‌ಗೂ ಸಾಕಷ್ಟು ವ್ಯತ್ಯಾಸವಿದೆ. ಹೀಗಾಗಿ ಈ ನೂತನ ಸೌಲಭ್ಯದ ಪರೀಕ್ಷಾರ್ಥ ಪ್ರಯೋಗ ಇನ್ನೂ ಕೆಲವು ವಾರಗಳ ಕಾಲ ನಡೆಯಲಿದೆ.

ಆ್ಯಂಡ್ರಾಯ್ಡ್: ಆ್ಯಂಡ್ರಾಯ್ಡ್‌ನಲ್ಲಿ ಫೈಲ್ ಶೇರ್ ಮಾಡುವಾಗ ಸಮೀಪದ ಫೋನ್‌ಗಳ ಪಟ್ಟಿಯು ತೆರೆದುಕೊಳ್ಳುತ್ತದೆ. ಈ ಪೈಕಿ ಯಾರೊಂದಿಗೆ ಫೈಲ್‌ಗಳನ್ನು ಹಂಚಿಕೊಳ್ಳಬೇಕೋ ಅವರ ಹೆಸರನ್ನು ಆಯ್ದುಕೊಂಡು ಮುಂದುವರೆಯಬಹುದು.

ಐಒಎಸ್: ಆ್ಯಪಲ್‌ನ ಡಿವೈಸ್‌ಗಳಲ್ಲಿ ಇದು ಕೊಂಚ ವಿಭಿನ್ನವಾಗಿದ್ದು, ಫೈಲ್‌ಗಳನ್ನು ಹಂಚಿಕೊಳ್ಳಲು ಕ್ಯುಆರ್ ಕೋಡ್ ಅಭಿವೃದ್ಧಿಪಡಿಸಲಾಗಿದೆ. ಇದನ್ನು ಸ್ಕ್ಯಾನ್ ಮಾಡಿ ಮುಂದುವರೆಯಬಹುದು.

ಈಚೆಗೆ ಮಾರ್ಕ್ ಜುಕರ್‌ಬರ್ಗ್ 'ಕಾಂಟೆಕ್ಸ್ಟ್ ಕಾರ್ಡ್' ಎಂಬ ಫೀಚರ್ ಬಿಡುಗಡೆ ಮಾಡಿದ್ದರು. ಇದು, ಯಾವುದೇ ವ್ಯಕ್ತಿಯ ಅನುಮತಿ ಇಲ್ಲದೆ ಅಥವಾ ಗಮನಕ್ಕೆ ಬಾರದೆ ವಾಟ್ಸ್‌ಆ್ಯಪ್ ಗುಂಪಿಗೆ ಸೇರಿಸಿದಲ್ಲಿ, ಅಂಥವರ ಅನುಕೂಲಕ್ಕಾಗಿ ಈ ಫೀಚರ್ ಕಾರ್ಯನಿರ್ವಹಿಸಲಿದೆ. ತಿಳಿಯದೇ ಸೇರಿಕೊಂಡ ಗುಂಪಿನ ಬಗ್ಗೆ, ಗುಂಪಿಗೆ ಸೇರಿಸಿದವರ ಮಾಹಿತಿ, ಗುಂಪು ರಚನೆಗೊಂಡ ಬಗೆಗಿನ ಸಂಪೂರ್ಣ ಮಾಹಿತಿಯನ್ನು 'ಕಾಂಟೆಕ್ಸ್ಟ್ ಕಾರ್ಡ್'ನ ಮೂಲಕ ತಿಳಿದುಕೊಳ್ಳಬಹುದು. ■

### ವಾಟ್ಸ್‌ಆ್ಯಪ್‌ನಲ್ಲೂ ಅನುವಾದ

ಸಂದೇಶಗಳನ್ನು ಅನುವಾದಿಸುವ ಫೀಚರ್ ಅಭಿವೃದ್ಧಿಯಲ್ಲಿ ತೊಡಗಿಕೊಂಡಿರುವ ವಾಟ್ಸ್‌ಆ್ಯಪ್ ಈ ಬಗ್ಗೆ ಬೇಟಾ ಆವೃತ್ತಿಯಲ್ಲಿ ಪ್ರಾಯೋಗಿಕ ಪರೀಕ್ಷೆ ನಡೆಸಿದೆ. ಅನುವಾದದ ಆಯ್ಕೆ ಬಳಸುವುದರ ಆಯ್ಕೆಯನ್ನು ಬಳಕೆದಾರರಿಗೆ ನೀಡಲಾಗಿದೆ. ಯಾವೆಲ್ಲ ಭಾಷೆಗಳಲ್ಲಿ ಇದು ಲಭ್ಯವಾಗಲಿದೆ ಎಂಬುದು ಇನ್ನೂ ತಿಳಿದಿಲ್ಲ.

